ದಿನಾಂಕ 18.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ- ಶ್ರೀ.ಡಿ.ಎಂ.ಕೆ.ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರದ ಪ್ಯಾರಾ 3 ರಲ್ಲಿ ಕಾಳಪ್ಪರವರ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿ. ಕಾಳಪ್ಪರವರಿಗೆ ಆಸ್ತಿಯನ್ನು ಯಾವ ವರ್ಷ ನೀಡಲಾಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 1984 ಮತ್ತು 1988 ನೇ ಇಸವಿಯಲ್ಲಿ ಆದಂತಹ ವಿಭಾಗ ಪತ್ರಗಳಲ್ಲಿ ಕಾಳಪ್ಪನವರು ಪಕ್ಷಗಾರರಾಗಿದ್ದರು ಎಂದರೆ ಸರಿ. ನಾನು ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸದರಿ ವಿಚಾರವನ್ನು ವಾದಪತ್ರದಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ಅಸಲು ದಾವಾ ಸಂಖ್ಯೆ 23/2011 ರಲ್ಲಿ ನಾನು ನನ್ನ ತಂದೆಯ ಜಿ.ಪಿ.ಎ ಹೋಲ್ಡರ್ ಆಗಿ ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿ. ಸದರಿ ದಾವೆಯ ಸಾಕ್ಷ್ಯ ವಿಚಾರಣೆಯ ಸಂದರ್ಭದಲ್ಲಿ ನಾನು 1984 ರಲ್ಲಿ ಆದಂತಹ ವಿಭಾಗ ಪತ್ರವನ್ನು 1988 ರಲ್ಲಿ ನೋಂದಣಿ ಮಾಡಿಸಿರುತ್ತೇವೆ ಎಂದು ನುಡಿದಿರುತ್ತೇನೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು, ಮನೆ ಬಿಟ್ಟು ನೋಂದಣಿ ಮಾಡಲಾಗಿರುತ್ತದೆ ಎಂದು ಉತ್ತರಿಸಿರುತ್ತಾರೆ. ನಮ್ಮ ಕುಟುಂಬಕ್ಕೆ ಪ್ರತ್ಯೇಕವಾದ ಸ್ಮಶಾನ ಇರುವುದಿಲ್ಲ. 1984 ರಲ್ಲಿ ಆದಂತಹ ವಿಭಾಗಪತ್ರದಲ್ಲಿ ಕುಟುಂಬದ ಸ್ಮಶಾನದ ಬಗ್ಗೆ ನಮೂದು ಮಾಡಲಾಗಿದೆ ಎಂದರೆ ಸರಿಯಲ್ಲ. ಸದರಿ ವಿಚಾರ ನಮೂದಾಗಿದ್ದರೂ ಸಹ ನಾನು ಪ್ರತಿವಾದಿಗಳಿಗೆ ಮೋಸ

ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿದಿರುತ್ತೇನೆ ಎಂದರೆ ಸರಿಯಲ್ಲ.

1988 ನೇ ಇಸವಿಯ ವಿಭಾಗಪತ್ರದಲ್ಲಿ ಮನೆ, ಕಣ, ಕೊಟ್ಟಿಗೆ ಮತ್ತು ಹೊರ ಮನೆ ನಮ್ಮ ಹಿಸ್ಸೆಗೆ ನೀಡಿರುವ ಬಗ್ಗೆ ನಮೂದು ಇರುವುದಿಲ್ಲ. 1984 ರಲ್ಲಿ ಆದಂತಹ ವಿಭಾಗಪತ್ರದ ಪ್ರಕಾರ ಪಕ್ಷಗಾರರು ನಡೆದುಕೊಂಡಿದ್ದು, ಕಂದಾಯ ದಾಖಲೆಗಳನ್ನು ಪಕ್ಷಗಾರರ ಹೆಸರಿಗೆ ಮಾಡಿಸಿಕೊಳ್ಳುವ ಉದ್ದೇಶದಿಂದ ವಿಭಾಗಪತ್ರವನ್ನು ಮಾಡಲಾಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂತೆ ಪ್ರತಿವಾದಿಗಳು ಅನುಮತಿಯ ಆಧಾರದ ಮೇಲೆ ದಾವಾ ಸ್ವತ್ತುಗಳಲ್ಲಿ ಇರುವ ಮನೆಯಲ್ಲಿ ಸ್ವಾ ಧೀನದಲ್ಲಿ ಇರುವುದಿಲ್ಲ, ಬದಲಿಗೆ ಕಳೆದ 60 ವರ್ಷಗಳಿಂದ ಅವರು ಸದರಿ ಮನೆಯಲ್ಲಿ ಸ್ವಾಧೀನಾನುಭವದಲ್ಲಿ ಇದ್ದಾರೆ ಎಂದರೆ ಸರಿಯಲ್ಲ.

ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ 1988 ರ ವಿಭಾಗಪತ್ರವು ನೋಂದಣಿಯಾದ 23 ವರ್ಷಗಳ ಬಳಿಕ ನಾವು ಮೊದಲಿನ ದಾವೆಯನ್ನು 2011 ರಲ್ಲಿ ದಾಖಲಿಸಿರುತ್ತೇವೆ ಎಂದರೆ ಸರಿ. ಸದರಿ ದಾವೆಯಲ್ಲಿ ಪ್ರತಿವಾದಿಗಳು ಮನೆ, ಅಂಗಳ ಮತ್ತು ಹೊರಮನೆಯಲ್ಲಿ ಸ್ವಾ ಧೀನದಲ್ಲಿ ಇರುವುದಾಗಿ ತಿಳಿಸಿದ್ದೆವು ಎಂದರೆ ಸರಿ. ನಮ್ಮ ಅನುಮತಿಯ ಮೇರೆಗೆ ಪ್ರತಿವಾದಿಗಳು ಮನೆಯಲ್ಲಿ ಸ್ವಾ ಧೀನದಲ್ಲಿ ಇರುವುದಾಗಿ ಸದರಿ ದಾವೆಯಲ್ಲಿ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಿಚಾರವನ್ನು ನಾವು ಆ ದಾವೆಯಲ್ಲಿ ತಿಳಿಸಿದ್ದರೂ ಸಹ ಪ್ರತಿವಾದಿಗಳಿಗೆ ಮೋಸ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ

ಎಂದರೆ ಸರಿಯಲ್ಲ. ಅಸಲು ದಾವಾ ಸಂಖ್ಯೆ 23/2011 ರ ತೀರ್ಪಿನ ಮೇಲೆ ಮೇಲ್ಮನವಿ ಸಲ್ಲಿಸಿದ್ದು,ಸದರಿ ಮೇಲ್ಮನವಿಯಲ್ಲಿ ತೀರ್ಪು ನಮ್ಮ ವಿರುದ್ಧ ಬಂದ ಬಳಿಕ ನಾವು ಅಸಲು ದಾವಾ ಸಂಖ್ಯೆ 61/2016 ನ್ನು ದಾಖಲಿಸಿರುತ್ತೇವೆ ಎಂದರೆ ಸರಿ. ಸದರಿ ದಾವೆಯನ್ನು ದಾಖಲಿಸಿದ ತಿಂಗಳಿನಲ್ಲಿ ಈ ದಾವೆಯನ್ನು ಹೂಡಲಾಗಿರುತ್ತದೆ ಎಂದರೆ ಸರಿ.

ಅಸಲು ದಾವಾ ಸಂಖ್ಯೆಃ61/2016 ನ್ನು 2018 ರಲ್ಲಿ ನ್ಯಾಯಾಲಯದಿಂದ ಹಿಂದಕ್ಕೆ ಪಡೆದುಕೊಂಡಿರುತ್ತೇವೆ. ಪ್ರತಿವಾದಿಗಳು ತಮ್ಮ ಹಕ್ಕಿನಂತೆ ದಾವಾ ಸ್ವತ್ತುಗಳಲ್ಲಿನ ಮನೆಯಲ್ಲಿ ಸ್ವಾ ಧೀನಾನುಭವದಲ್ಲಿ ಇದ್ದಾರೆಯೇ ಹೊರತು ಅಕ್ರಮ ಪ್ರವೇಶ ಮಾಡುವಂತಹ ಸಂದರ್ಭ ಅವರಿಗೆ ಒದಗಿ ಬಂದಿರಲಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳು ಸ್ವಾಧೀನದಲ್ಲಿರುವ ಮನೆಯನ್ನು ಅವರಿಂದ ಕಸಿದುಕೊಳ್ಳುವ ದುರುದ್ದೇಶದಿಂದ ಅವರ ವಿರುದ್ಧ ಸುಳ್ಳು ದಾವೆಯನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ**- **ಇಲ್ಲ**.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.